ಇಂದು ದಿಃ **23-04-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಆರ್.ಜಿ ವಕೀಲರಿಂದ ಮದ್ಯಂತರ ಅರ್ಜಿಯ ನಂಬರ್ 1 ರ ಆದೇಶ ಕುರಿತಂತೆ ಎದುರುದಾರರ ಪರಃ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿ ಇರುವ ಪ್ರತಿಜ್ಞೆಯನ್ನು ಓದಿರುತ್ತೀರಿ ಎಂದು ಕೇಳಲು ಒಂದೊಂದು ಅಕ್ಷರ ಬಿಟ್ಟುಹೋಗುತ್ತವೆ ಎಂದು ಹೇಳುತ್ತಾರೆ. ನನಗೆ ವ್ಯವಹಾರದ ಜ್ಞಾನ ಇದೆ. ಎದುರುದಾರರ ನನ್ನ ವಿರುದ್ದ ಅಸಲು ದಾವಾ ನಂಬರ್ 2/2021 ನ್ನು ದಾಖಲು ಮಾಡಿದ್ದರು ಎಂದರೆ ಸರಿ. ಆತ ಕ್ರಯದ ಕರಾರು ಪತ್ರದ ಆಧಾರದ ಮೇಲೆ ದಾವೆ ಮಾಡಿದ್ದನು ಎಂದರೆ ಸರಿ. ದಾವೆ ದಾಖಲು ಮಾಡುವ ಪೂರ್ವದಲ್ಲಿ ಎದುರುದಾರರ/ವಾದಿ ನನಗೆ ನೋಟೀಸ್ ಸಹ ಕೊಟ್ಟಿದ್ದನು ಎಂದರೆ ಸರಿ. ಸಾಕ್ಷಿ ನನಗೆ ಹಾರ್ಟ್ ಆಪರೇಷನ್ ಆಗಿತ್ತು ಎಂದು ಹೇಳುತ್ತಾರೆ. ನಾನು ಶಸ್ತ್ರ ಚಿಕಿತ್ಸೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನೋಟೀಸ್ ನೀಡಿದ ನಂತರ ದಿನಾಂಕಃ04-01-2021 ರಂದು ದಾವೆ ದಾಖಲು ಮಾಡಿದನು ಎಂದರೆ ಸರಿ. ದಾವಾ ಸಮನ್ಸ್ ನನಗೆ ಮತ್ತು ನನ್ನ ಹೆಂಡತಿಗೆ ಬಂದಿರುತ್ತದೆ ಎಂದರೆ ಸರಿ. ದಿನಾಂಕಃ09-02-2023 ರಂದು ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನನಗೆ ಈ ಅಪೀಲಿನ ಸಂಖ್ಯೆ ಅಥವಾ ದಾವೆಯ ಸಂಖ್ಯೆ ಹೇಳಲು ಆಗುವುದಿಲ್ಲ. ಎದುರುದಾರನ ಹೆಸರಿಗೆ ಪಹಣಿ ಆದ ನಂತರ, ನನಗೆ ಗೊತ್ತಾಗಿರುತ್ತದೆ. ಪಹಣಿಯಲ್ಲಿ ಯಾವ ಆಧಾರದ ಮೇಲೆ ಎದುರುದಾರನ ಹೆಸರು ದಾಖಲು ಆಯಿತು ಎಂದು ಗೊತ್ತಿಲ್ಲ. ಎದುರುದಾರ ಅಮಲುಜಾರಿ ಸಂಖ್ಯೆ 32/2023 ನ್ನು ದಾಖಲು ಮಾಡಿದ್ದನು ಎಂದರೆ ಸರಿ. ದಿನಾಂಕಃ10-02-2023 ರಂದು ಸದರಿ ಅಮಲುಜಾರಿ ಅರ್ಜಿ ದಾಖಲಾಗಿತ್ತು ಎಂದರೆ ಸರಿ. ಸದರಿ EP No.32/2023 ರಲ್ಲಿಯೂ ನನಗೆ ಮತ್ತು

ನನ್ನ ಹೆಂಡತಿಗೆ ನೋಟೀಸ್ ಬಂದಿತ್ತು ಎಂದರೆ ಸರಿ. ಸಾಕ್ಷಿ ನನಗೆ ಹುಶಾರು ಇಲ್ಲದೇ ಇರುವ ಕಾರಣ ಬರಲು ಆಗಲಿಲ್ಲ ಎಂದು ಹೇಳುತ್ತಾರೆ. ಯಾವ ಸಮಯದಲ್ಲಿ ನನಗೆ ಹೃದಯದ ತೊಂದರೆ ಆಗಿತ್ತು ಎಂದು ನನಗೆ ಇಸವಿ, ತಿಂಗಳು ಮತ್ತು ದಿನಾಂಕ ಹೇಳಲು ಆಗುವುದಿಲ್ಲ. ನನಗೆ ಅಮಲುಜಾರಿ ಅರ್ಜಿ ದಾಖಲಾಗಿ ನೋಟೀಸ್ ಬಂದಾಗ ಯಾವುದೇ ಅನಾರೋಗ್ಯ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ25-10-2023 ರಂದು ಸದರಿ ಅಮಲುಜಾರಿ ಅರ್ಜಿಯಲ್ಲಿ, ನಮಗೆ ನೋಟೀಸ್ ಜಾರಿಯಾದರೂ ಹಾಜರು ಆಗಿಲ್ಲ ಎಂದು ಆದೇಶ ಪುಟದಲ್ಲಿ ನಮೂದಾಗಿದೆ ಎಂದರೆ ಸರಿ. ನಾನು ನಂತರದಲ್ಲಿ ಅಮಲುಜಾರಿ ಅರ್ಜಿಯಲ್ಲಿ ಹಾಜರು ಆಗಿ ತಕರಾರು ಸಲ್ಲಿಸಿದೆನು ಎಂದರೆ ಸರಿ. ಯಾವ ತಿಂಗಳಲ್ಲಿ ತಕರಾರು ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲ.

ಸದರಿ EP No.32/2023 ರಲ್ಲಿ ನ್ಯಾಯಾಲಯದ ಮುಖಾಂತರ ಎದುರುದಾರನಿಗೆ ಕ್ರಯಪತ್ರ ಆಗಿದೆ ಎಂದರೆ ಸಾಕ್ಷಿ ಅದು ಗೊತ್ತಾದ ನಂತರ ಈ ಅಪೀಲು ಸಲ್ಲಿದ್ದೇನೆ ಎಂದು ಹೇಳುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಸ್ವಾಧೀನ ಸಹ ಆದೇಶ ಆಗಿದೆ ಎಂದರೆ ಸಾಕ್ಷಿ ಆದೇಶ ಆಗಿದೆ ಆದರೆ ಸ್ವಾಧೀನದಲ್ಲಿ ಇಲ್ಲ ಎಂದು ಹೇಳುತ್ತಾರೆ. ಕ್ರಯ ಆಗಿಲ್ಲ ಎಂದು ಹೇಳಿ ನಾನು EP No.32/2023 ರಲ್ಲಿ ತಕರಾರು ಸಲ್ಲಿಸಿದ್ದೆನು. ನಾನು ಆ ರೀತಿ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು EP No.32/2023 ರಲ್ಲಿ ಎದುರುದಾರರಿಗೆ ಸ್ವಾಧೀನ ಕೊಡಲು ಆದೇಶ ಆಗಬಾರದು ಎಂದು ಕೇಳಿದ್ದೆನು ಎಂದರೆ ಸರಿ. ಅದೇ ರೀತಿ ಅಮಲುಜಾರಿ ಅರ್ಜಿಯನ್ನು ವಜಾ ಮಾಡಲು ಕೇಳಿದ್ದೆನು ಎಂದರೆ ಸರಿ. ನನ್ನ ತಕರಾರನ್ನು ತಳ್ಳಿಹಾಕಿ, EP No.32/2023 ರಲ್ಲಿ ಸ್ವಾಧೀನಕೊಡಲು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ08-10-2025 ರಲ್ಲಿ EP No.32/2023 ಮುಕ್ತಾಯಗೊಂಡಿತು ಎಂದರೆ

ಸರಿ. EP No.32/2023 ರ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಗೊತ್ತಿಲ್ಲ. ಅಸಲು ದಾವಾ ನಂಬರ್ 2/2021 ಮತ್ತು EP No.32/2023 ಚಾಲ್ತಿಯಲ್ಲಿ ಇದ್ದ ಬಗ್ಗೆ ಚಾಲ್ತಿಯಲ್ಲಿದ್ದಾಗಲೇ ಮಾಹಿತಿ ಇತ್ತು ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳು ದಿನಾಂಕಃ14-07-2023 ರಿಂದ 2026 ರವರೆಗಿನ ವೈದ್ಯಕೀಯ ದಾಖಲೆಗಳು ಎಂದರೆ ಸರಿ. ಸಹ್ಯಾದ್ರಿ ನಾರಾಯಣ ಆಸ್ಪತ್ರೆ ಶಿವಮೊಗ್ಗದಲ್ಲಿ ಇದೆ. ನನ್ನ ಊರು ನೆಲಹೊನ್ನೆ ಎಂದರೆ ಸರಿ. ಶಿವಮೊಗ್ಗಕ್ಕೆ ಹೋಗಬೇಕೆಂದರೆ ನೆಲಹೊನ್ನೆ ಅಲ್ಲಿಂದ ಹೊನ್ನಾಳಿ ನಂತರ ಶಿವಮೊಗ್ಗಕ್ಕೆ ಹೋಗಬೇಕು ಎಂದರೆ ಸರಿ. ದಾವೆ ಮತ್ತು ಅಮಲುಜಾರಿ ಅರ್ಜಿ ಹೊನ್ನಾಳಿಯಲ್ಲಿ ನಡೆಯುತ್ತಿದ್ದವು ಎಂದರೆ ಸರಿ. ನಿ.ಪಿ-1 ನ್ನು ಈಗ ದಾವೆ ಡಿಕ್ರಿಯಾದ ನಂತರ, ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅರ್ಜಿಗೆ ಅನುಕೂಲ ಆಗಲಿ ಎಂದು ಈಗ ಸೃಷ್ಠಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿ ನಮೂದಿಸಿದ ವೈದ್ಯರನ್ನು ನನಗೆ ತೀವ್ರ ಸ್ವರೂಪದ ಕಾಯಿಲೆ ಇತ್ತು ಎಂದು ಸಾಬೀತುಪಡಿಸಲು ವಿಚಾರಣೆ ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ ವೈದ್ಯರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ವೈದ್ಯಕೀಯ ವರದಿಯಲ್ಲಿ ಬಿ.ಪಿ ಮತ್ತು ಶುಗರ್ ಬಗ್ಗೆ ಮಾತ್ರ ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ಈ ಅಪೀಲು ಸಲ್ಲಿಸಲು ಎಷ್ಟು ದಿನದ ವಿಳಂಭ ಆಗಿದೆ ಎಂದು ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನು ಮಾಹಿತಿ ಕೊಟ್ಟಿದ್ದೇನೆ. ಎಷ್ಟು ದಿನ ವಿಳಂಭ ಇದೆ ಎಂದು ಬರೆಯಿಸಿದ್ದೇನೆ ಎಂದು ಗೊತ್ತಿಲ್ಲ. ಏನೇನು ಕಾರಣ ತಿಳಿಸಿದ್ದೇನೆ ಎಂದು ಗೊತ್ತಿಲ್ಲ. ನಾನು ಅರ್ಜಿಯಲ್ಲಿ ತಿಳಿಸಿದ ದಿನಗಳಿಗಿಂತ ಹೆಚ್ಚು ವಿಳಂಭ ಆಗಿದೆ ಎಂದರೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.